ಹುಕ್ಕೇರಿ ತಾಲ್ಲೂಕಿನ ಮಾರ್ಕಂಡೇಯ ಯೋಜನೆಯ ಎಡದಂಡೆ ಕಾಲುವೆ ವಿಸ್ತರಣೆ

146 (1555) ಶ್ರೀ ಉಮೇಶ್ ವಿಶ್ವನಾಥ್‌ಕತ್ತಿಹುಕ್ಕೇರಿ : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲ್ಲೂಕಿನ ಮಾರ್ಕಂಡೇಯ ಜಲಾಶಯದಿಂದ ಹೊರಡುವ ಎಡದಂಡೆ ಕಾಲುವೆಯನ್ನು 12 ಕಿಮೀ. ದಿಂದ 14. 50 ಕಿಮೀ ರವರೆಗೆ ವಿಸ್ತರಿಸಿದರೆ ಅಂದಾಜು 2000 ಎಕರೆ ಜಮೀನು ನೀರಾವರಿ ಸೌಲಭ್ಯ ಪಡೆಯಬಹುದಾಗಿದೆ. ಕೇವಲ 2. 5 ಕಿ.ಮೀ. ಗಳ ವಿಸ್ತರಣೆಯಿಂದ 2000 ಎಕರೆ ಜಮೀನನ್ನು ನೀರಾವರಿ ಗೊಳಿಸಿ ಆ ಭಾಗದ ರೈತರಿಗೆ ಅನುಕೂಲ ಮಾಡಿಕೊಡಲು ಸರಕಾರ ತೆಗೆದುಕೊಂಡ ಕ್ರಮವೇನು?

ಆ) ಮಾರ್ಕಂಡೇಯ ಯೋಜನೆ ಬಲದಂಡೆ ಕಾಲುವೆ 40 ರಲ್ಲಿ ಸುಮಾರು 4 ಕಿಮೀ. ವಿಸ್ತರಣೆ ಮಾಡಿದರೆ 4000 ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಬಹುದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಈ ಬಗ್ಗೆ ಸರಕಾರ ತೆಗೆದುಕೊಳ್ಳುವ ಕ್ರಮವೇನು?

ಶ್ರೀ ಎಚ್. ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಬೆಳಗಾವಿ ಜಿಲ್ಲೆ, ಹುಕ್ಕೇರಿ ತಾಲ್ಲೂಕಿನ ಮಾರ್ಕಂಡೇಯ ಯೋಜನೆಯ ಎಡದಂಡೆ ಕಾಲುವೆಯನ್ನು ಕಿ.ಮೀ, 12ರಿಂದ 14. 50 ರವರೆಗೆ ವಿಸ್ತರಿಸಿ, ಸುಮಾರು 2000 ಎಕರೆ ಪ್ರದೇಶಕ್ಕೆ ಹೆಚ್ಚಿನ ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಇದರ ಬಗ್ಗೆ ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ) ಬಂದಿದೆ ಬಲದಂಡೆ ಕಾಲುವೆಯ , ಕಿಮೀ21 ರಿಂದ ಕಿಮೀ. 80ರ ವರೆಗಿನ ಸರ್ವೆ ಕೆಲಸವನ್ನು ಮೆ: ಸಿಕಾನ್ ಸರ್ವೆ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಗೆ ಟೆಂಡರ್ ಆಧಾರದ ಮೇಲೆ ವಹಿಸಿದ್ದು, ಕಿಮೀ. 40 ರವರೆಗಿನ ಸರ್ವೆ ಕೆಲಸ ಮುಗಿದಿದೆ ಮತ್ತು ಉಳಿದ ಸರ್ವೆ ಕೆಲಸ ಪ್ರಗತಿಯಲ್ಲಿದೆ. ಸದರಿ ಸಂಸ್ಥೆಯ ವರದಿ ಪ್ರಕಾರ ಕಿಮೀ. 0 ರಿಂದ ಕಿಮೀ. 40 ರ ವರೆಗಿನ ಕಾಲುವೆಯಿಂದ 23, 207 ಎಕರೆ ಪ್ರದೇಶಕ್ಕೆ ನೀರಾವರಿ ಒದಗಿಸಬಹುದಾಗಿದೆ. ಸದರಿ ಸಂಸ್ಥೆಯವರು ಸರ್ವೆ ಕೆಲಸ ಪೂರ್ಣಗೊಳಿಸಿ ಮಾಹಿತಿ ಒದಗಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಉಮೇಶ್ ವಿಶ್ವನಾಥ್ ಕತ್ತಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳಿದಂತಹ ಮೊದಲನೆ ಪ್ರಶ್ನೆಗೆ ಈಗಾಗಲೇ ಸರ್ವೇ ಕೆಲಸ ನಡೆದಿದೆ, ಆದರೆ ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಮತ್ತು ಮಾರ್ಕಂಡೇಯ ನದಿಯಿಂದ ಬರುವಂತಹ ನೀರಿನಿಂದ ಈಗಾಗಲೇ ಅಲ್ಲಿ ಸುಸೂತ್ರವಾಗಿ ನೀರಾವರಿ ಆಗುವಂತಹ ಕೆಲಸವಾಗಿದೆ. ಇನ್ನು ಉಳಿದಿರುವಂತಹ ಎರಡು ಸಾವಿರ ಅಲ್ಲೆ ನೀರಾವರಿಯಾಗಿ ಆ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಬೇಡಿ. ಕೆಲಸ ಮಾಡುತ್ತೇವೆಂದು ಹೇಳಿ. ಅದಕ್ಕೆ ಖಚಿತವಾದ ಉತ್ತರವನ್ನು ಕೊಡಬೇಕು. ಅದರ ಜೊತೆಗೆ ಕಳೆದ ಹತ್ತಾರು ವರ್ಷಗಳಿಂದ ಮಾರ್ಕಂಡೇಯ ನದಿಯ ನೀರು ವರ್ಷದಲ್ಲಿ ಎಂಟತ್ತು ತಿಂಗಳು ನೀರು ಹರಿಯುತ್ತಿತ್ತು. ಆ ನದಿಯ ಪಕ್ಕದಲ್ಲಿ ಇರುವಂತಹ ರೈತರು ಪಂಪ್‌ಸೆಟ್ ಹಾಕುವುದು, ದನಕರುಗಳಿಗೆ ನೀರು ಕುಡಿಸುವುದು

ಎಲ್ಲಾ ಆಗುತ್ತಿತ್ತು. ಆದರೆ ಈಗ ಮಾರ್ಕಂಡೇಯ ನದಿಗೆ ಡ್ಯಾಂ ಏನು ಕಟ್ಟುತ್ತಿದ್ದಾರೆ ಅದಕ್ಕೆ ಸ್ಲೂಯಿಸ್ ಗೇಟ್ ಹಾಕುತ್ತಿಲ್ಲ. ಅದರ ನೀಲಿ ನಕ್ಷೆಯನ್ನು ನಾನೇ ನೋಡಿದ್ದೇನೆ. ಆದನ್ನು ಹಾಕುವ ಕಾರ್ಯಕ್ರಮ ಇಲ್ಲ. ಆದರೆ ಹಾಕದೆ ಇರುವುದರಿಂದ ಮುಂಚೆ ಬರುವಂತಹ ಹತ್ತಾರು ಹಳ್ಳಿಗಳಿಗೆ ಈಗಾಗಲೇ ಇರುವಂತಹ ನೀರಾವರಿ ಸೌಲಭ್ಯ ತಪ್ಪಿ ಹೋಗುತ್ತದೆ. ಆದುದರಿಂದ ಆ ಸ್ಲೂಯಿಸ್ ಗೇಟ್ ಹಾಕುವಂತಹ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಪಿ.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ಉಮೇಶ್ ಕತ್ತಿ ಹಾಗೂ ರಮೇಶ್ ಜಾರಕಿಹೊಳಿ ಅವರು, 12 ರಿಂದ 14 ನೇ ಕಿಲೋಮೀಟರ್‌ರವರೆಗೆ ಈ ಕಾಲುವೆ ಉದ್ದವನ್ನು ವಿಸ್ತರಿಸಿದರೆ 2000 ಎಕರೆ ಭೂಮಿಗೆ ನೀರಾವರಿಯಾಗುತ್ತದೆ ಹಾಗೂ ಕಾಲುವೆಯನ್ನು ತೆಗೆಯುವುದು ಸಹ ಕಡಿಮೆ ಖರ್ಚಿನಲ್ಲಿ ಸಾಧ್ಯವಾಗುತ್ತದೆಂದು ಹೇಳಿದ್ದಾರೆ. ಈಗಾಗಲೇ ಅದರ ಬಗ್ಗೆ ಸರ್ವೆ ಮಾಡುವುದಕ್ಕೆ ಸೂಚನೆ ಕೊಟ್ಟಿದ್ದೇವೆ. ತಾಂತ್ರಿಕ ಸಲಹಾ ಸಮಿತಿ ಎದುರಿಗೆ ಈ ವಿಷಯವನ್ನು ಇಟ್ಟು ಅಂತಿಮವಾಗಿ ನಿರ್ಣಯ ತೆಗೆದುಕೊಳ್ಳುತ್ತೇವೆ. ಈಗ ತಾವು ಹೇಳಿರತಕ್ಕಂಥ ಮಾಹಿತಿ ಪ್ರಕಾರ ಇಷ್ಟು ಕಡಿಮೆ ವೆಚ್ಚದಲ್ಲಿ ಮತ್ತೆ ಎರಡು ಸಾವಿರ ಎಕರೆಗೆ ವಿಸ್ತಾರ ಮಾಡುವುದಕ್ಕೆ ಸಾಧ್ಯವಾದರೆ ಆ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ. ನೀರಿನ ಪ್ರಮಾಣ ಸಹ 0. 15 ಟಿ.ಎಂ.ಸಿ. ನಮಗೆ ಬೇಕಾಗುತ್ತದೆ. ಆದುದರಿಂದ ನೀರಿನ ಕೊರತೆ ಏನು ವಿಶೇಷವಾಗಿ ಕಾಣುತ್ತಿಲ್ಲ. ಆದರೆ ತಾಂತ್ರಿಕವಾಗಿ ಏನಾದರೂ ತೊಡಕುಗಳು ಇದ್ದರೆ ಅವನ್ನು ಗಮನದಲ್ಲಿಟ್ಟುಕೊಂಡು ತಾಂತ್ರಿಕ ಸಲಹಾ ಸಮಿತಿ ವರದಿ ಬಂದಮೇಲೆ ಅದರ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳುತ್ತೇವೆ. ತಾವು ಈ ನದಿಗೆ ನೀರು ಬಿಡುವ ಸಲುವಾಗಿ ರಿವರ್ ಸ್ಲೂಯಿಸ್ ಮಾಡಬೇಕೆಂದು ಸಲಹೆ ಮಾಡಿದ್ದೀರಿ. ತಮಗೆ ಗೊತ್ತಿದೆ, ಮಾರ್ಕಂಡೇಯ ಯೋಜನೆ 120 ಕೋಟಿ ರೂಪಾಯಿಗಳ ಒಂದು ವೆಚ್ಚದಿಂದ ಭರದಿಂದ ಕೆಲಸ ಪ್ರಾರಂಭವಾಗಿದೆ. ಹಿಂದೆ ಮಾಡಿರತಕ್ಕಂಥ ನೀಲಿ ನಕ್ಷೆಯಲ್ಲಿ ರಿವರ್ಸ್ ಸ್ಲೂಯಿಸ್ ಇರಲಿಲ್ಲ. ಆ ಕಾರಣದಿಂದ ಈ ಡ್ಯಾಂ ಕಂಪ್ಲೀಟ್ ಆದಮೇಲೆ ಆ ನದಿ ಪಾತ್ರದಲ್ಲಿ ಇದ್ದಂತಹ ಜನರಿಗೆ ಸಾಕಷ್ಟು ತೊಂದರೆ ಆಗುತ್ತದೆ ಎಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆ ಭಾಗದ ರೈತರು ಸಹ ಸಾಕಷ್ಟು ಜನ ಬಂದು ಭೇಟಿಯಾಗಿದ್ದಾರೆ. ಆ ಒಂದು ಹಿನ್ನೆಲೆಯಲ್ಲಿ ಆ ನದಿ ಪಾತ್ರದಲ್ಲಿ ಇದ್ದವರಿಗೆ ತೊಂದರೆ ಮಾಡಬಾರದು ಎಂದು ಸರ್ಕಾರದ ಉದ್ದೇಶ. ಆದುದರಿಂದ ಆ ರೀವರ್ಸ್ ಸ್ಲೂಯಿಸ್ ಅನ್ನು ಈ ಸಂದರ್ಭದಲ್ಲಿ ಪ್ರೊವೈಡ್ ಮಾಡಬೇಕು ಎನ್ನುವ ಸಲುವಾಗಿ ನಾನು ಈಗಾಗಲೇ ಸಂಬಂಧಪಟ್ಟಿರತಕ್ಕಂಥ ನಿಗಮದ ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಸೂಚನೆ ಕೊಟ್ಟಿದ್ದೇನೆ. ತಕ್ಷಣ ತಾಂತ್ರಿಕ ಸಲಹಾ ಸಮಿತಿಯನ್ನು ಕರೆದು ಈ ಒಂದು ಮಾರ್ಪಾಟು ಏನು ಮಾಡಬೇಕಾಗಿದೆ ಅದನ್ನು ಮಾಡಿ ನದಿ ಪಾತ್ರದಲ್ಲಿ ಇರುವವರಿಗೂ ಸಹ ನೀರು ಬಿಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕೆಂದು ಸೂಚನೆ ಕೊಡುತ್ತೇನೆ. ಈ ವಿಚಾರವಾಗಿ ತಮ್ಮ ಜೊತೆ ಚರ್ಚೆ ಮಾಡುತ್ತೇನೆ. ಹಾಗೂ ಏನಾದರೂ ವಿಶೇಷ ತೊಂದರೆ, ತೊಡಕುಗಳು ಇದ್ದರೆ ನಿಮ್ಮ ಹತ್ತಿರ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸ್ಲೂಯಿಸ್ ಗೇಟ್ ಬಗ್ಗೆ ಹೇಳಿದರು. ಈಗಾಗಲೇ ಮಾರ್ಕಂಡೇಯ ಬಚಾವ್ ಎಂದು ಆಂದೋಲನ ಮಾಡುತ್ತಿದ್ದಾರೆ ಅದು ತಮ್ಮ ಗಮನಕ್ಕೆ ಬಂದಿದೆ. ನನ್ನ ಹತ್ತಿರ ಕೆಲವರು ಒಂದು ಮನವಿ ಪತ್ರ ಕೊಟ್ಟು ಹೋಗಿದ್ದಾರೆ. ಇದೇ ಸಮಸ್ಯೆ ಇರತಕ್ಕದ್ದು. ಆ ಮಾರ್ಕಂಡೇಯ ಯೋಜನೆಗೆ ಸಿರೂರು ಪಕ್ಕದಲ್ಲಿ

ಏನು ಅಣೆಕಟ್ಟು ಕಟ್ಟುತ್ತಿದ್ದೀರಿ ಅದರ ನಂತರ ಏನು ನೀರು ಹರಿದು ಹೋಗುತ್ತದೆ ಅಲ್ಲೆ ಇದ್ದಂತಹ 35 ಕಿಲೋಮೀಟರ್ ಸುತ್ತಮುತ್ತಲಿನ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಸಿಗುವುದಿಲ್ಲವೆಂಬ ಕೊರಗು ಇದೆ. ಆದುದರಿಂದ ಈ ಸ್ಲೂಯೆಸ್ ಗೇಟ್ ಕಟ್ಟಿದ್ದರೆ ಅನುಕೂಲವಾಗುತ್ತದೆಂದು, ಅದನ್ನು ಪರಿಗಣನೆ ಮಾಡಬೇಕು. ಅದರ ಬಗ್ಗೆ ತೀವ್ರಗತಿಯಿಂದ ಚಳುವಳಿ ನಡೆಯುತ್ತಿದೆ. ಅದರ ಬಗ್ಗೆ ಅವರುಗಳನ್ನು ಕರೆಸಿ ಮಾತನಾಡಬೇಕೆಮದು ಒಂದು ಸಲಹೆ. ಮತ್ತೆ ನಮ್ಮ ಕೇಂದ್ರ ಜಲಸಂಪನ್ಮೂಲ ಸಚಿವರಾದ ವಿಜಯ ಚಕ್ರವರ್ತಿಯವರು ಫೆಬ್ರವರಿ 27ರಂದು ಲೋಕಸಭೆಯಲ್ಲಿ 1997ರಲ್ಲೆ ಅಂದಿನ ರಾಜ್ಯಸರ್ಕಾರ ಸಲ್ಲಿಸಿದ್ದ ಮಾರ್ಕಂಡೇಯ ನೀರಾವರಿ ಯೋಜನೆ ಬಗ್ಗೆ ಕೇಂದ್ರ ಜಲಸಂಪನ್ಮೂಲ ಆಯೋಗ ಕೇಳಿದ ವಿವರಗಳನ್ನು ಇನ್ನು ನೀಡಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಈ ಯೋಜನೆಗೆ ಅನುಮತಿ ನೀಡಿಲ್ಲವೆಂದು ಹೇಳಿದ್ದಾರೆ. ಅದಕ್ಕೆ ಕೆಲವು ಕ್ಲಾರಿಫಿಕೇಷನ್ ಕೇಳಿದ್ದಾರೆ. ಅದಕ್ಕೋಸ್ಕರ ಅದು ಪೆಂಡಿಂಗ್ ಇದೆಯೇ ಅಥವಾ ಅದರ ಬಗ್ಗೆ ತಾವು ವಿರರಗಳನ್ನು ಕೊಟ್ಟಿದ್ದೀರೋ ಹೇಗೆ?

ಶ್ರೀ ಮಹಾಂತೇಶ್ ಎಸ್.ಕೌಜಲಗಿ : ಮಾನ್ಯ ಅಧ್ಯಕ್ಷರೆ, ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸ್ಪಷ್ಟೀಕರಣ ಬೇಕು. ಈ ಮಾರ್ಕಂಡೇಯ ನೀರಾವರಿ ಯೋಜನೆಯಲ್ಲೆ ಬೈಲುಹೊಂಗಲ ಮತ್ತು ಸವದತ್ತಿ ತಾಲ್ಲೂಕಿನ ಏತನೀರಾವರಿ ಯೋಜನೆಯನ್ನು ತೆಗೆದುಕೊಳ್ಳಬೇಕೆಂದು ಇದೆ. ಅದಕ್ಕೆ ಏನಾದರೂ ಸರ್ವೇ ಕಾರ್ಯ ಪ್ರಾರಂಭ ಮಾಡಿದ್ದೀರೋ ಹೇಗೆ? ಅಲ್ಲಿ ಸರ್ವೆ ಮಾಡಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಆ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಸಚಿವರು ತಿಳಿಸಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ಮಾರ್ಕಂಡೇಯ ಬಚಾವ್ ಆಂದೋಲನವನ್ನು ಏನು ಮಾಡುತ್ತಿದ್ದಾರೆ. ಈದರ ಬಗ್ಗೆ ಈಗ ನಮ್ಮ ಮುಂದೆ ಬಂದಿರುವಂತಹ ಪ್ರಶ್ನೆ ಏನೆಂದರೆ ಎಡದಂಡೆ ಕಾಲುವೆ 12 ಕಿ.ಮೀ. ನಿಂದ 14 ಕಿ.ಮೀ.ಗೆ ವಿಸ್ತಾರ ಮಾಡುವಂಥಾದ್ದು, ಹುಕ್ಕೇರಿ ತಾಲ್ಲೂಕಿನ ರೈತರ ವಿಶೇಷವಾದಂತಹ ಆಗ್ರಹವಾಗಿರುತ್ತದೆ. ಅದು ಮೇಲ್ನೋಟಕ್ಕೆ ಸರಿ ಎಂದು ಅನಿಸಿರುವುದರಿಂದ ಅದನ್ನು ನಾವು ಪರಿಗಣನೆ ಮಾಡುತ್ತಿದ್ದೇವೆ. ಇನ್ನು ಮಾನ್ಯ ಮಹಂತೇಶ್ ಕೌಜಲಗಿಯವರು ಕೇಳಿದಂತಹ ಪ್ರಶ್ನೆ ಬಗ್ಗೆ ಹೇಳುವುದಾದರೆ ಈಗಾಗಲೇ 40 ಕಿ.ಮೀ. ವರೆಗೆ ಸರ್ವೆ ಆಗಿ ಇನ್‌ವೆಸ್ಟಿಗೇಷನ್ ಆಗಿದೆ, ಟೆಂಡರ್ ಡಾಕ್ಯುಮೆಂಟ್ಸ್ ಎಲ್ಲಾ ಕೆಲಸಗಳು ಆಗಿವೆ. ಇದು ಒಟ್ಟು 40 ಕಿ.ಮೀ. ನಿಂದ 81 ಕಿ.ಮೀ. ಬಲದಂಡೆ ಕಾಲುವೆ ಉದ್ದವಾಗಿದೆ. ಅಲ್ಲಿ 33 ಸಾವಿರ ಎಕರೆ ಭೂಮಿಗೆ ನೀರಾವರಿಯಾಗುತ್ತದೆ, 40 ಕಿ.ಮೀ, ಕಾಲುವೆಯಿಂದ 23 ಸಾವಿರ ಎಕರೆ ಭೂಮಿಗೆ ನೀರಾವರಿಯಾಗುತ್ತದೆ. ಈಗ 40 ಕಿ.ಮೀ. ನಿಂದ 80 ಕಿ.ಮೀ. ಗೆ ಸರ್ವೆ ಕೆಲಸ ಈಗ ನಡೆದಿದೆ. ಇನ್ನು ಎರಡು ತಿಂಗಳುಗಳಲ್ಲಿ ಈ ಕೆಲಸ ಮುಗಿಯುತ್ತದೆ. ನಾವು ಒಮ್ಮೆಲೆ 01 ಕಿ.ಮೀ. ನಿಂದ 81 ಕಿ.ಮೀ. ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇನೆ. ಈ ಮಾರ್ಕಂಡೇಯ ಯೋಜನೆಯನ್ನು ನವೆಂಬರ್ ತಿಂಗಳೊಳಗೆ ಮಾಡಿ ಮುಗಿಸಬೇಕೆಂದು ಇದ್ದೇವೆ. ಇನ್ನು ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಸ್ತಾಪ ಮಾಡಿದಂತಹ ವಿಚಾರದ ಬಗ್ಗೆ ಕೇಂದ್ರದಿಂದ ಕೆಲವು ಪರವಾನಗಿಗಳು ನಮಗೆ ಬಂದಿಲ್ಲ. ಅದಕ್ಕೆ ಕೇಂದ್ರ ಸರ್ಕಾರದ ಮಂತ್ರಿಗಳು ಕೊಟ್ಟಿರುವಂತಹ ಉತ್ತರವನ್ನು ನಾನು ಕೆಲವು ಪತ್ರಿಕೆಗಳಲ್ಲಿ ನೋಡಿದೆ. ನಾವು ಅದಕ್ಕೆ ರಾಜ್ಯ ಸರ್ಕಾರದಿಂದ ಏನು ವಿವರಗಳನ್ನು ಕಳುಹಿಸಬೇಕಾಗಿತ್ತೋ ಆ ಎಲ್ಲಾ ವಿವರಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಈ ಯೋಜನೆಯ ಬಗ್ಗೆ ಇನ್ನು ಹೆಚ್ಚಿನ ಮಾಹಿತಿಯನ್ನು ಅವರು ಕೇಳಿದರೆ ಅದನ್ನು ಸಹ ನಾವು ಕೊಡುತ್ತೇವೆ,

ಇದು ಅಷ್ಟೇ ಅಲ್ಲ, ಹಿಂದೆ ಎಂ.ಪಿ.ಗಳ ಮೀಟಿಂಗ್‌ನಲ್ಲಿ ಏನು ಒಂದು ಪುಸ್ತವನ್ನು ಸರ್ಕ್ಯುಲೆಟ್ ಮಾಡಿದಂತಹ ಸಂದರ್ಭದಲ್ಲೂ ಸಹಿತ ಈ ಮಾರ್ಕೆಂಡೇಯ ಯೋಜನೆಗೆ ಕೊಡಬೇಕಾದಂತಹ ಒಪ್ಪಿಗೆಯ ಬಗ್ಗೆಯೂ ಸಹ ನಾವು ಬರೆದಿರುವಂತಹ ಪತ್ರಗಳ ನಕಲನ್ನು ಅವರಿಗೆ ಕಳುಹಿಸಿಕೊಡಲಾಗಿದೆ. ಈ ಉತ್ತರದ ಹಿನ್ನಲೆಯಲ್ಲಿ ಮತ್ತೆ ರಾಜ್ಯ ಸರ್ಕಾರ ರಿಮೆಂಡರ್ ಅನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಿಕೊಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಸ್ಲೂಯಿಸ್ ಗೇಟ್ ಬಗ್ಗೆ ಕೇಳಿದ್ದೆ.

ಶ್ರೀ ಹೆಚ್. ಕೆ. ಪಾಟೀಲ್ : ಈ ಸ್ಲೂಯಿಸ್ ಗೇಟ್ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ, ಈ ನದಿ ಪಕ್ಕದಲ್ಲಿರುವವರಿಗೆ ಡ್ಯಾಮ್ ಕಟ್ಟುವುದರಿಂದ ತೊಂದರೆಯಾಗಬಾರದು. ಆ ದೃಷ್ಟಿಯಿಂದ ನದಿಯಿಂದ ಅವರಿಗೂ ಸ್ವಲ್ಪ ಪ್ರಮಾಣದಲ್ಲಿ ನೀರು ಬಿಡುವಂಥಾದಕ್ಕೆ ಅನುಕೂಲವಾಗುವ ರೀತಿಯಲ್ಲಿ ರಿವರ್ಸ್ ಸುಯ್ಲಿಸ್ ಗೇಟನ್ನು ಅಳವಡಿಸುವಂಥಾದ್ದಕ್ಕೆ ವಿಶೇಷ ವ್ಯವಸ್ಥೆಯನ್ನು ಮಾಡುತ್ತೇವೆ.

<u>ಪ್ರಶ್ನೆ: 1598</u>

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕಿರ್ಲೋಸ್ಕರ್ ಕಾರ್ಖಾನೆಯ ಮುಷ್ಕರವಾಗುತಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದಾರೆ. ಈ ಕಾರ್ಖಾನೆಗಳು ಮುಷ್ಕರವನ್ನು ಮಾಡಿದರೆ ಅದಕ್ಕೆ ನಮ್ಮ ಕಾರ್ಮಿಕ ಸಚಿವರು ಉತ್ತರವನ್ನು ಕೊಡಬೇಕು. ಇದರ ಬಗ್ಗೆ ನನಗೆ ತಿಳಿದುಬಂದಿರುವಂತಹ ಮಾಹಿತಿಯ ಪ್ರಕಾರ ಕಿರ್ಲೋಸ್ಕರ್ ಕಾರ್ಖಾನೆಯ ಫೌಂಡ್ರಿ ಕಾರ್ಮಿಕರ ಹಾಗೂ ಮ್ಯಾನೇಜ್‌ಮೆಂಟ್‌ನವರೊಡನೆ ಸೆಟಲ್‌ಮೆಂಟ್ ಆಗಿದೆ, ಎಂದು ತಿಳಿದು ಬಂದಿದೆ.ಇದರಿಂದ ಮಾನ್ಯ ಸದಸ್ಯರಿಗೆ ತೃಪ್ತಿಯಾಗಿದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಅಲ್ಲಿ ಲೇಬರ್ ಕಮೀಷನರ್ ಮತ್ತು ಲೇಬರ್ ಮಿನಿಸ್ಟರ್‌ರವರೊಡನೆ ಮಾತನಾಡಿ ಎಲ್ಲಾ ಸೆಟಲ್‌ಮೆಂಟ್ ಮಾಡಿದ್ದಾರೆ. ಆ ಕಾರ್ಖಾನೆಯೂ ಪ್ರಾರಂಭವಾಗಿದೆ, ಆದರೆ ಇದಕ್ಕೆ ಸಂಬಂಧಿಸಿದ ಹಾಗೆ ಈ ಕಾರ್ಖಾನೆ ಇರುವ ಬೇವಿನಹಳ್ಳಿಯ ಗ್ರಾಮಸ್ಥರು, ರೈತರು ಐದು ದಿವಸಗಳಿಂದ ಅಮರಣಾಂತ ಉಪವಾಸವನ್ನು ಜಿಲ್ಲಾ ಕಚೇರಿಯ ಬಳಿ ಕೈಗೊಂಡಿದ್ದಾರೆ, ಅಲ್ಲಿ ಜಲ ಮಾಲಿನ್ಯವಾಗಿದೆ, ಭೂ ಮಾಲಿನ್ಯವಾಗಿದೆ, ಇದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮವಾಗಿದೆ. ಅದಕ್ಕೆ ನಮಗೆ ಪರಿಹಾರವನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಇದರ ಬಗ್ಗೆ ಸಂಬಂಧಿಸಿದ ಮಂತ್ರಿಯವರು ಏನು ಉತ್ತರವನ್ನು ಕೊಡುತ್ತಾರೆಂದು ಕೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರು ಜಲ ಮಾಲಿನ್ಯವಾಗಿದೆ, ಮತ್ತೆ ಇದರಿಂದ ಜಮೀನುಗಳು ಹಾಳಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಸಂಬಂಧಪಟ್ಟವರೊಡನೆ ಚರ್ಚೆ ಮಾಡಿ ಇದರಿಂದ ರೈತರಿಗೆ ಅನ್ಯಾಯವಾಗಿದ್ದರೆ, ಸರ್ಕಾರದಿಂದ ಸಹಾಯ ಮಾಡುವುದಿದ್ದರೆ ಖಂಡಿತ ಸಹಾಯ ಮಾಡುತ್ತದೆ. ಅಥವಾ ಒಂದು ವೇಳೆ ಕೈಗಾರಿಕೆಯ ಮೇಲೆ ಒತ್ತಾಯ ಮಾಡಿ ಸಹಾಯ ಮಾಡುವುದಿದ್ದರೆ ಮಾಡಿ ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತೇನೆ.